210	ಹಗರಿಬೊಮ್ಮನಹಳ್ಳಿ (ಎಸ್‌ಸಿ)	19.88	110.5
211	ಹಡಗಲಿ (ಎಸ್‌ಸಿ)	71.36	200.58
212	ಕೂಡ್ಲಗಿ (ಎಸ್‌ಟಿ)	18.00	65.79
	ಹಡಗಲಿ	109.24	376.87
213	ರಾಯಚೂರು	39.92	86
214	ರಾಯಚೂರು ರೂರಲ್ (ಎಸ್‌ಟಿ)	88.47	75.67
215	ಮಾನ್ವಿ (ಎಸ್‌ಟಿ)	488.13	49.78
216	ದೇವದುರ್ಗ	217.21	46.72
217	ಲಿಂಗಸುಗೂರು (ಎಸ್‌ಸಿ)	32.15	69.36
218	ಮಸ್ಕಿ (ಎಸ್‌ಟಿ)		
219	ಸಿಂಧನೂರ	9.92	56.05
	ರಾಯಚೂರು	875.80	383.58
220	ಗಂಗಾವತಿ	73.50	186.21
221	ಕನಕಗಿರಿ (ಎಸ್‌ಸಿ)	93.78	
222	ಕೊಪ್ಪಳ	130.50	176.69
223	ಕುಷ್ಟಗಿ	133.00	108.55
224	ಯಲಬುರ್ಗಾ	127.50	66.87
	ಕೊಪ್ಪಳ	558.28	538.32
	ಒಟ್ಟು:	11760.00	22538.25

209 ಶ್ರೀ.ಸತ್ಯನಾರಾಯಣ.ಎಂ (ಚಾಮುಂಡೇಶ್ವರಿ)
ಮಾನ್ಯ ಲೋಕೋಪಯೋಗಿ ಸಚಿವರು

ಅ) ಮೈಸೂರು ತಾಲ್ಲೂಕು ಇಲವಾಲದಿಂದ ಕೆ.ಆರ್.ನಗರಕ್ಕೆ ಹೋಗುವ ರಸ್ತೆಯಲ್ಲಿ ಸಾಗರಕಟ್ಟೆ ಹತ್ತಿರ ಕೆ.ಆರ್.ಡಿ.ಸಿ.ಎಲ್. ವತಿಯಿಂದ ನಿರ್ಮಿಸುತ್ತಿರುವ ಸೇತುವೆ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಕಾಮಗಾರಿ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು?

ಇಲವಾಲದಿಂದ ಕೆ.ಆರ್.ನಗರಕ್ಕೆ ಹೋಗುವ ರಸ್ತೆಯಲ್ಲಿ ಸಾಗರಕಟ್ಟೆಯ ಹತ್ತಿರ ಕೆ.ಆರ್.ನಗರ ಹಿನ್ನೀರಿನಲ್ಲಿ ಸೇತುವೆಯ ನಿರ್ಮಾಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂರನೇ ಹಂತದ ಸೇತುವೆಯ ಯೋಜನೆಯ ಅಡಿಯಲ್ಲಿ ಹೆಚ್ಚುವರಿ ಕಾಮಗಾರಿಯಾಗಿ ರೂ.10.00 ಕೋಟಿಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲಾಯಿತು. ಈ ಕಾಮಗಾರಿಯನ್ನು ಮೆ:ಗ್ಯಾಮನ್ ಇಂಡಿಯಾ ಲಿ. ಇವರಿಗೆ ವಹಿಸಲಾಗಿದೆ. ಈ ಸೇತುವೆ ಕಾಮಗಾರಿಯನ್ನು ಅಕ್ಟೋಬರ್ 2006 ರಲ್ಲಿ ಪ್ರಾರಂಭಿಸಲಾಗಿದೆ. ಸೇತುವೆಯ ಕಾಮಗಾರಿಯನ್ನು ಕೆ.ಆರ್.ಎಸ್. ಜಲಾಶಯದಲ್ಲಿನ ನೀರಿನ ಮಟ್ಟ ಕಡಿಮೆ ಆಗದಿರುವುದರಿಂದ ಜೂನ್ 2007ರಿಂದ ಸ್ಥಗಿತಗೊಂಡಿದೆ. ಅಲ್ಲದೇ ಸೇತುವೆಯ ಈಗಿನ ಅಂದಾಜು ಮೊತ್ತವು ಕೂಡ ಹೆಚ್ಚಾಗಿರುವುದರಿಂದ ಹೆಚ್ಚುವರಿ ಅನುದಾನ ನೀಡುವ ಕುರಿತು ಪರಿಶೀಲಿಸಲಾಗುತ್ತಿದೆ.

212 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್.

ಮಾನ್ಯ ಸಾರಿಗೆ ಸಚಿವರು.

ಅ) ಸಾರಿಗೆ ಇಲಾಖೆಯ ಬಸ್ಸುಗಳನ್ನು ಎಷ್ಟು ಕಿ.ಮೀ. ಕ್ರಮಿಸಿದ ನಂತರ ನಿರುಪಯುಕ್ತವೆಂದು ಪರಿಗಣಿಸಲಾಗುವುದು;

8.5 ಲಕ್ಷ ಕಿ.ಮೀ.ಗಳು.

ಆ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ಡಿಪೋಕ್ಕೆ ಸಂಬಂಧಿಸಿದ ಎಷ್ಟು ವಾಹನಗಳನ್ನು ನಿರುಪಯುಕ್ತವೆಂದು ಪರಿಗಣಿಸಲಾಗಿದೆ;

2008-09ನೇ ಸಾಲಿನಲ್ಲಿ 18 ವಾಹನಗಳು.

ಇ) ಸಾರ್ವಜನಿಕರ ಅನುಕೂಲಕ್ಕಾಗಿ ಅವಶ್ಯವಿರುವ ಬಸ್ಸುಗಳನ್ನು ಪೂರೈಸಲಾಗುತ್ತದೆಯೇ;

ಹೌದು.

ಈ) ಹಾಗಿದ್ದಲ್ಲಿ, ಯಾವಾಗ ಪೂರೈಸಲಾಗುವುದು;

ಇನ್ನೂ ಹೆಚ್ಚಿನ ಹೊಸ ಬಸ್ಸುಗಳನ್ನು ಹಂತ ಹಂತವಾಗಿ ಪೂರೈಸಲಾಗುವುದು.

ಉ) ಜಮಖಂಡಿ ಘಟಕವನ್ನು ಮೇಲ್ದರ್ಜೆಗೆ ಏರಿಸುವ ವಿಚಾರ ಸರ್ಕಾರಕ್ಕಿದೆಯೇ?

ಇದೆ.

ಜಮಖಂಡಿ ಬಸ್ ಘಟಕವನ್ನು ಮೂಲಭೂತ ಸೌಲಭ್ಯವನ್ನೊಳಗೊಂಡಂತೆ ಮೇಲ್ದರ್ಜೆಗೇರಿಸಲು ಯೋಜಿಸಲಾಗಿದೆ. ಸದರಿ ಕಾಮಗಾರಿಗಳನ್ನು ಸಂಸ್ಥೆಯ